ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/32/ಇಸಿಎಸ್(2)/2024

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
email:dte.commissioner@gmail.com

ದಿನಾಂಕ:10.03.2025

## ಸುತ್ತೋಲೆ

ವಿಷಯ: ನವೆಂಬರ್-2024 ರ ಡಿಪ್ಲೋಮ ಸೆಮಿಸ್ಟರ್ ಥಿಯರಿ ಪರೀಕ್ಷೆಗಳ ಮೌಲ್ಯಮಾಪನವಾದ ಉತ್ತರಪತ್ರಿಕೆಗಳ ಮರುಮೌಲ್ಯಮಾಪನ ಕಾರ್ಯಕ್ಕೆ ಉಪನ್ಯಾಸಕರನ್ನು ನಿಯೋಜಿಸುವ ಬಗ್ಗೆ.

ಉಲ್ಲೇಖ: 1.ಈ ಕಛೇರಿ ಜ್ಞಾಪನ ಸಂ: ಬಿಟಿಇ/32/ಇಸಿಎಸ್(2)/2024ದಿ:10.03.2025
2.ಸರ್ಕಾರಿ ಆದೇಶ ಸಂ:ಇಡಿ/57/ಟಿಪಿಇ/2013 ಬೆಂಗಳೂರು ದಿ: 17.04.2015
3.ಸರ್ಕಾರಿ ತಿದ್ದುಪಡಿ ಆದೇಶಸಂ:ಇಡಿ/87/ಟಿಪಿಇ/2023 ಬೆಂಗಳೂರು ದಿ:16.02.2024

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನವೆಂಬರ್-2024ರ ಡಿಪ್ಲೋಮ ಸೆಮಿಸ್ಟರ್ ಥಿಯರಿ ಪರೀಕ್ಷೆಗಳ ಮೌಲ್ಯಮಾಪನವಾದ ಉತ್ತರಪತ್ರಿಕೆಗಳ ಮರುಮೌಲ್ಯಮಾಪನ ಕಾರ್ಯವನ್ನು **ದಿನಾಂಕ: 12.03.2025 ರಂದು ಸರ್ಕಾರಿ ಮುದ್ರಣ ತಂತ್ರಜ್ಞಾನ ಸಂಸ್ಥೆ, ಅರಮನೆ ರಸ್ತೆ, ಬೆಂಗಳೂರು** ಇಲ್ಲಿ ನಡೆಸಲು ಕ್ರಮ ಕೈಗೊಳ್ಳಲಾಗಿದೆ.

ಮರು ಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸಲಾದ ಉಪನ್ಯಾಸಕರ ಪಟ್ಟಿಯನ್ನು ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ. ಸದರಿ ಪಟ್ಟಿಯಲ್ಲಿ ನಮೂದಿಸಲಾಗಿರುವ ಉಪನ್ಯಾಸಕರುಗಳನ್ನು ಕಡ್ಡಾಯವಾಗಿ ಮರುಮೌಲ್ಯಮಾಪನ ಕೇಂದ್ರಕ್ಕೆ ನಿಯೋಜಿಸುವಂತೆ ಸಂಬಂಧಪಟ್ಟ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ ಸೂಚಿಸಲಾಗಿದೆ. ಮರುಮೌಲ್ಯಮಾಪನ ಪ್ರಕ್ರಿಯೆಗಳು ಪೂರ್ಣಗೊಳ್ಳುವವರೆಗೆ ಉಪನ್ಯಾಸಕರುಗಳಿಗೆ ಯಾವುದೇ ರೀತಿಯ ರಜೆ ಮಂಜೂರು ಮಾಡಬಾರದೆಂದು ಸ್ಪಷ್ಟವಾಗಿ ತಿಳಿಸಲಾಗಿದೆ.

ಮರುಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಕರ್ತವ್ಯಲೋಪವೆಸಗುವ ಉಪನ್ಯಾಸಕರ ಮೇಲೆ ಉಲ್ಲೇಖಿತ ಸರ್ಕಾರಿ ಆದೇಶಗಳ ಪ್ರಕಾರ ಕ್ರಮಕೈಗೊಳ್ಳಲಾಗುವುದು ಹಾಗೂ ಮರುಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸಲ್ಪಟ್ಟ ಉಪನ್ಯಾಸಕರುಗಳು ಗೈರುಹಾಜರಾದರೆ, ಗೈರು ಹಾಜರಾದ ಅವಧಿಯ ವೇತನವನ್ನು ತಾಂತ್ರಿಕ ಪರೀಕ್ಷಾ ಮಂಡಳಿಯ 151ನೇ ಕೇಂದ್ರ ಸಭೆಯ ನಿರ್ಣಯ 151.3.5ರ ಅನ್ವಯ ಕಟಾಯಿಸಲಾಗುವುದು ಮತ್ತು ಮತ್ತು 171ನೇ ಕೇಂದ್ರ ಸಭೆಯ ನಿರ್ಣಯ 171.3.7(3) ಮತ್ತು 184ನೇ ವಿಶೇಷ ಕೇಂದ್ರ ಸಭೆಯ ನಿರ್ಣಯ 184.4 ಪ್ರಕಾರ ಕ್ರಮ ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ. ಮರುಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸಲಾದ ಉಪನ್ಯಾಸಕರನ್ನು ಬಿಡುಗಡೆಗೊಳಿಸದ ಪ್ರಿನ್ಸಿಪಾಲರುಗಳನ್ನು ಮುಂದಿನ ಆಗುಹೋಗುಗಳಿಗೆ ನೇರ ಹೊಣೆಗಾರರನ್ನಾಗಿಸಿ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಲಾಗಿದೆ.

| ಕ್ರ.ಸಂ. | ಮರು ಮೌಲ್ಯಮಾಪನ ದಿನಾಂಕ | ಬೋರ್ಡ್‌ನ ಹೆಸರು |
|---|---|---|
| 1 | 12.03.2025<br>ಬೆಳಗ್ಗೆ 9.30 ರಿಂದ | AT, CE, CS, EC, EE, ME, SC, CP, ENG, AN, MC, MN, MT, MTT, PT, ADFT, AR, LT, CH, CHEMISTRY, CN, CR, EI,PO, TX, EN, Kannada and all other branches |

ಕಾರ್ಯದರ್ಶಿ

ಇವರಿಗೆ:

ರಾಜ್ಯದಲ್ಲಿನ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ ಮಾಹಿತಿಗಾಗಿ ಮತ್ತು ಮುಂದಿನ ಅಗತ್ಯ ಕ್ರಮಕ್ಕಾಗಿ

ಪ್ರತಿ: 1) ಇ-ಆಡಳಿತ ವಿಭಾಗಕ್ಕೆ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
2) ಕಂಪ್ಯೂಟರ್ ವಿಭಾಗ – ಮರುಮೌಲ್ಯಮಾಪಕರ ಪಟ್ಟಿಯನ್ನು ಬಿಟಿಇಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು
3) ಆಯುಕ್ತರವರ ಆಪ್ತಶಾಖೆ
4) ನಿರ್ದೇಶಕರವರ ಆಪ್ತಶಾಖೆ
5) ಕಾರ್ಯದರ್ಶಿಯವರ ಆಪ್ತ ಶಾಖೆ
6) ಇಬಿಎಲ್ ವಿಭಾಗ

Scanned with CamScanner